**ಸಾಕ್ಷಿಗೆ ದಿನಾಂಕ 02.08.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀವಕೀಲರಿಂದಃ**

2 ನೇ ವಾದಿ ನನ್ನ ತಂಗಿ ಎಂದರೆ ಸರಿ. ಪ್ರತಿವಾದಿ ನನ್ನ ತಮ್ಮ ಎಂದರೆ ಸರಿ. ದಾವಾ ಸ್ವತ್ತು ಐಟಂ ನಂಬರ-4 ನನ್ನ ತಂದೆಗೆ ಸರ್ಕಾರದಿಂದ ಮಂಜೂರಾದ ಸ್ವತ್ತು. ಸರ್ವೆ ನಂಬರ 1/371 ಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತೇನೆ. ದಾವಾ ಜಮೀನುಗಳನ್ನು ನನ್ನ ತಾಯಿಗೆ ಸರ್ಕಾರದವರು ಮಂಜೂರು ಮಾಡಿರುತ್ತಾರೆ. ದಾವಾ ಸ್ವತ್ತುಗಳು ಪ್ರತಿವಾದಿಯ ಹೆಸರಿನಲ್ಲಿವೆ. ಪ್ರತಿವಾದಿಗೆ ಯಾವ ರೀತಿ ಖಾತೆ ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಸಾಕ್ಷಿ ಮೋಸದಿಂದ ಬದಲಾವಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 1/371 ರಲ್ಲಿ ಒಟ್ಟು ಎರಡು ಎಕರೆ 29 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ 1/371 ಪ್ರಸ್ತುತ ಸರ್ವೆ ನಂಬರ 1 ಆಗಿದೆ ಎಂದರೆ ಸರಿ. ಸದರಿ ಜಮೀನಿನ ಪ್ರಸ್ತುತ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. 1978-79 ರಲ್ಲಿ ದಾವಾ ಜಮೀನುಗಳು ನನ್ನ ತಾಯಿಗೆ ಮಂಜೂರಾಗಿದೆ ಎಂದರೆ ಸರಿ. ನನ್ನ ತಾಯಿ ಬದುಕಿದ್ದಾಗ ಖಾತೆ ಬದಲಾವಣೆ ಮಾಡಿಕೊಂಡು ತೆರಿಗೆ ಪಾವತಿಸಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. ದಿಃ19.11.2020 ರಲ್ಲಿ ನನ್ನ ತಾಯಿ ಪ್ರತಿವಾದಿಯ ಹೆಸರಿಗೆ ದಾವಾ ಜಮೀನಿಗೆ ಸಂಬಂಧಿಸಿದಂತೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಕ್ಕು ಬಿಡುಗಡೆ ಪತ್ರದ ಆಧಾರದ ಮೇಲೆ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎದಂರೆ ಸರಿ. ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ನನ್ನ ತಾಯಿಗೆ ಸಾಗುವಳಿ ಮೂಲಕ ದಾವಾ ಜಮೀನುಗಳು ಮಂಜೂರಾದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಹಾಜರುಪಡಿಸುತ್ತೇನೆ. ನಮ್ಮ ತಂದೆ ತಾಯಿ ಬದುಕಿದ್ದಾಗ ದಾವಾ ಸ್ವತ್ತುಗಳನ್ನು ದಿಃ22.07.2013 ರಲ್ಲಿ ಪ್ರತಿವಾದಿಯ ಮಕ್ಕಳ ಹೆಸರಿಗೆ ಮರಣ ಶಾಸನ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತಾಯಿ ತೀರಿಕೊಂಡ ನಂತರ ಪ್ರತಿವಾದಿಯ ಮಕ್ಕಳು ಅಲ್ಪವಹಿ ಆಗಿದ್ದರಿಂದ ಮೃತ್ಯ ಪತ್ರದಂತೆ ಪ್ರತಿವಾದಿ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ತಂದೆ ತಾಯಿಯ ಸ್ವಯರ್ಜಿತ ಸ್ವತ್ತು, ಹಾಗಾಗಿ ಅದನ್ನು ಯಾವ ರೀತಿ ಬೇಕಾದರು ವಿಲೇವಾರಿ

ಮಾಡಬಹುದು ಎಂದರೆ ಸರಿಯಲ್ಲ. ಪ್ರತಿವಾದಿ ಹಾಗೂ ಅವರ ಮಕ್ಕಳು ನನ್ನ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಂಡಿದ್ದರಿಂದ ಸ್ವ ಇಚ್ಛೆಯಿಂದ ಅವರಿಗೆ ಹಕ್ಕು ಬಿಡುಗಡೆ ಪತ್ರ ಹಾಗೂ ಮೃತ್ಯ ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಂದೆ ತಾಯಿಯ ಸ್ವಯಾರ್ಜಿತ ಸ್ವತ್ತುಗಳಾಗಿದ್ದು ಹಕ್ಕು ಬಿಡುಗಡೆ ಪತ್ರ ಹಾಗೂ ಮೃತ್ಯ ಪತ್ರ ಬರೆದಿದ್ದರಿಂದ ನನಗಾಗಲಿ ನನ್ನ ತಂಗಿಗಾಗಲಿ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**